**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ: ಸಿ1(5)ವರ್ಗ/1/2022-23 ದಿನಾಂಕ:07.01.2023

ಜ್ಞಾಪನ

**ವಿಷಯ:** ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ಗ್ರೂಪ್-ಬಿ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ 5 ವರ್ಷ ಪೂರ್ಣಗೊಂಡ ಹಾಗೂ 3 ರಿಂದ 5 ವರ್ಷ ಪೂರೈಸಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಪಟ್ಟಿಯನ್ನು ಪ್ರಕಟಿಸುವ ಕುರಿತು

**ಉಲ್ಲೇಖ:** ಈ ಕಛೇರಿಯ ಅಧಿಸೂಚನೆ ಸಂಖ್ಯೆ.ಶಿ.ವ.ಕೋಶ.ಸಾ.ವ/01/2022-23 ದಿನಾಂಕ:26.12.2022

******

ವಿಷಯದನ್ವಯ,ಉಲ್ಲೇಖದ ಈ ಕಛೇರಿಯ ಅಧಿಸೂಚನೆಯಂತೆ 2022-23ನೇ ಸಾಲಿನ ವರ್ಗಾವಣೆಯನ್ನು ಹಮ್ಮಿಕೊಳ್ಳಲಾಗಿದೆ.

ಸದರಿ ಅಧಿಸೂಚನೆಯಲ್ಲಿನ ವೇಳಾಪಟ್ಟಿಯಂತೆ ನಿರ್ದಿಷ್ಟಪಡಿಸಿದ ಹುದ್ದೆಯಲ್ಲಿ 5 ವರ್ಷ ಪೂರ್ಣಗೊಂಡ ಹಾಗೂ 3 ರಿಂದ 5 ವರ್ಷ ಪೂರೈಸಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳ ತಾತ್ಕಲಿಕ ಪಟ್ಟಿಯನ್ನು ಇದರೊಂದಿಗೆ ಇಲಾಖೆಯ ವೈಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಈ ಪ್ರಕಟಿತ ಪಟ್ಟಿಗೆ ಆಕ್ಷೇಪಣೆಗಳಿದ್ದಲ್ಲಿ ಪೂರಕ ದಾಖಲೆಗಳೊಂದಿಗೆದಿನಾಂಕ:07.01.2023 ರಿಂದ 11.01.2023ರೊಳಗೆ ಸಂಬಂದಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರು(ಆಡಳಿತ) ಇವರಿಗೆ ಸಲ್ಲಿಸಲು ತಿಳಿಸಿದೆ. ಸಂಬಂದಿಸಿದ ಉಪ ನಿರ್ದೇಶಕರು(ಆಡಳಿತ)ರವರು ಆಕ್ಷೇಪಣೆಗಳನ್ನು ಪರಿಶೀಲಿಸಿ ಕ್ರೋಢೀಕರಿಸಿ ಈ ಕಛೇರಿಯ ಇ-ಆಡಳಿತ ಶಾಖೆ ಗೆ ಸಲ್ಲಿಸಲು ತಿಳಿಸಿದೆ, ನಿಗಧಿತ ದಿನಾಂಕದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ

ಡಾ.ರೂಪಶ್ರೀ.ಎಸ್, ಕೆ.ಎ.ಎಸ್,
ಜಂಟಿ ನಿರ್ದೇಶಕರು(ಆಡಳಿತ)

ಇವರಿಗೆ,
ಬೆಂಗಳೂರು/ಮೈಸೂರು ವಿಭಾಗದ ಉಪ ನಿರ್ದೇಶಕರು(ಆಡಳಿತ)
ಬೆಂಗಳೂರು/ಮೈಸೂರು ವಿಭಾಗದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

ಪ್ರತಿಯನ್ನು:-
1)ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ ರವರಿಗೆ ಮಾಹಿತಿಗಾಗಿ
2) ಕಛೇರಿ ಪ್ರತಿ